



## ಮೋಡದ ವಿನ್ಯಾಸದಲ್ಲಿ ಆಭರಣ

ಮೋಡದ ಪ್ರಿಂಟ್ ಇರುವ ಶೈನಿಂಗ್ ಒಡವೆಗಳು ಫ್ಯಾಷನ್‌ಪ್ರಿಯರಿಗೆ ಬಹಳ ಇಷ್ಟ. ಮೋಡದಿಂದ ಮಳೆ ಹನಿ ಬೀಳುತ್ತಿರುವಂತಹ ಡಿಸೈನ್ ಮಾಡಿದ ಸ್ಟಡ್ಸ್ ಅದೊಂಥರ ಹೈ ಫ್ಯಾಷನ್ ದುನಿಯಾದಲ್ಲಿ ದೂಳೆಬ್ಬಿಸುತ್ತಿದೆ. ಹ್ಯಾಂಗಿಂಗ್, ಜುಮುಕಿ, ಲೋಲಾಕು, ಹೂಪ್ಸ್ ಯಾವುದೇ ತರಹದ ಕಿವಿಯೋಲೆಗಳಿದ್ದರೂ ಕ್ಲೌಡ್ ಡಿಸೈನ್ ಚಂದ ಕಾಣಿಸುತ್ತದೆ. ನೀಲಿ ಆಗಸದ ತುಂಬೆಲ್ಲ ಬಿಳಿ ನೊರೆಯ ಡಿಸೈನ್ ಇರುವ ಹರಳಿನ ಕೀ ಚೈನ್, ಪೆಂಡೆಂಟ್, ಉಂಗುರ ಅತ್ಯಾಕರ್ಷಕ ಎನಿಸುತ್ತದೆ. ಮೋಡದ ಚಿತ್ತಾರವನ್ನು ಸೆರಾಮಿಕ್‌ನಲ್ಲಿ ಕುಸುರಿ ಮಾಡಿದ ಚೋಕರ್‌ಗಳು ಆನ್‌ಲೈನ್ ಶಾಪಿಂಗ್ ಸೈಟ್‌ಗಳಲ್ಲಿ ರಾರಾಜಿಸುತ್ತಿವೆ. ನೀರಿನ ಹನಿ ಬೀಳುತ್ತಿರುವಂತಹ ಡಿಸೈನ್‌ಗಳ ಕ್ರಿಸ್ಟಲ್ ನೆಕ್ಲೇಸ್‌ಗಳು ಅದ್ಭುತ.

ಲಾಂಗ್ ಚೈನ್‌ಗಳ ತುದಿಯಲ್ಲಿ ತೂಗಾಡುವ ಪೆಂಡೆಂಟ್‌ಗಳು ಕ್ಲೌಡ್ ಡಿಸೈನ್‌ನಲ್ಲಿ ಆಕರ್ಷಣೀಯ. ಮೋಡದ ಮಧ್ಯ ಹಾರಾಡುವ ಪ್ಲೇನ್, ಮೋಡ ಮತ್ತು ರೈನ್‌ಬೊ ಚಿತ್ತಾರವುಳ್ಳ ಫೆರಿಟೇಲ್ ಪೆಂಡೆಂಟ್ ಸ್ಟೈಲಿಷ್ ಲುಕ್ ಕೊಡುತ್ತದೆ. ಬ್ಲ್ಯೂ ಮತ್ತು ವೈಟ್ ಸೆರಾಮಿಕ್ ಚೋಕರ್ ಮತ್ತು ನೆಕ್ಲೇಸ್ ಸೌಂದರ್ಯದ ಹೊಸ ಭಾಷ್ಯ ಬರೆಯುತ್ತವೆ. ಮೆಟಲ್, ಸ್ಟೋನ್, ಫ್ಯಾಬ್ರಿಕ್, ವುಡನ್, ಸೆರಾಮಿಕ್, ಆಕ್ಸಿಡೈಸ್ಡ್, ಟೆರ್ರಾಕೋಟ ಎಲ್ಲ ತರಹದ ಮೆಟೀರಿಯಲ್‌ಗಳಿಗೂ ಈ ಕ್ಲೌಡ್ ಪ್ರಿಂಟ್ ಸೂಕ್ತ ಎನಿಸುತ್ತದೆ.

ಫಿಂಗರ್ ರಿಂಗ್ ಮೇಲೆ ಮೋಡದ ಪ್ರಿಂಟ್ ಫಂಕಿ ಲುಕ್‌ಗೆ ಪರ್ಫೆಕ್ಟ್. ಬಿಳಿ ಬಣ್ಣದ ಕ್ರಿಸ್ಟಲ್ ಉಂಗುರ ಮತ್ತು ಬ್ರೇಸ್ಲೆಟ್‌ಗಳ ಮೇಲೆ ಮಲ್ಟಿಪಲ್ ಮೋಡಗಳ ಚಿತ್ತಾರ ಹೆಚ್ಚಿನ ಬೇಡಿಕೆ ಹೊಂದಿದೆ. ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್ ಮತ್ತು ಜಯನಗರ ಶಾಪಿಂಗ್ ಸೆಂಟರ್‌ಗಳಲ್ಲಿ ಆರ್ಟಿಫಿಶಿಯಲ್ ಕ್ಲೌಡ್ ಜ್ಯುವೆಲರಿಗಳು ಸಿಗುತ್ತವೆ. ಆನ್‌ಲೈನ್ ಶಾಪಿಂಗ್ ಆ್ಯಪ್‌ಗಳಲ್ಲಿಯೂ ನೂರಾರು ಬಗೆಯ ಕ್ಲೌಡ್ ಜ್ಯುವೆಲ್ಲರಿಗಳನ್ನು ಖರೀದಿಸಬಹುದು.

ಹೇರ್ ಆ್ಯಕ್ಸೆಸರೀಸ್‌ಗಳಾದ ಕ್ಲಿಪ್, ಬ್ಯಾಂಡ್‌ಗಳಲ್ಲಿ ಮೋಡದ ಪ್ರಿಂಟ್ ಮಕ್ಕಳಿಗೆ ತುಂಬ ಇಷ್ಟವಾಗುತ್ತದೆ. ಮೋಡದ ಚಿತ್ತಾರದ ಸ್ಕೂಲ್ ಬ್ಯಾಗ್, ಲಂಚ್ ಬ್ಯಾಗ್, ವಾಟರ್ ಬಾಟಲ್, ಪೆನ್ ಪೆನ್ಸಿಲ್, ಬುಕ್‌ಲೆಟ್, ರೈಟಿಂಗ್ ಪ್ಯಾಡ್, ಶೂ, ಡ್ರೆಸ್ ಮಕ್ಕಳಿಗೆ ಇಷ್ಟವಾಗುವ ಸಾಮಗ್ರಿಗಳು.

ಮನೆ ಮತ್ತು ಆಫೀಸ್‌ಗಳಲ್ಲಿ ಇಂಟೀರಿಯರ್ ಡೆಕೊರೇಷನ್‌ಗಳಲ್ಲಿಯೂ ಸ್ಟಾರ್ ಮತ್ತು ಕ್ಲೌಡ್ ಡಿಸೈನ್ ಹೆಚ್ಚು ಜನಪ್ರಿಯತೆ ಗಳಿಸಿದೆ. ವಾಲ್ ಹ್ಯಾಂಗಿಂಗ್‌ಗಳಲ್ಲಿ ಮೋಡ, ಮಳೆ, ನಕ್ಷತ್ರ, ಅರ್ಧ ಚಂದ್ರಾಕೃತಿಯ ಡಿಸೈನ್ ಗೋಡೆಗಳನ್ನು ಚಂದಗಾಣಿಸುತ್ತದೆ. ಸೋಫಾ ಕವರ್, ಟೈಲ್ಸ್, ಫ್ಲವರ್ ವಾಸ್, ಫ್ಲೋರ್‌ಗಳಲ್ಲಿಯೂ ಸ್ಟಾರ್ ಮತ್ತು ಕ್ಲೌಡ್ ಡಿಸೈನ್ ಗೃಹಾಲಂಕಾರದಲ್ಲಿ ಅದ್ಭುತ ನೋಟ ಬೀರುವುದರಲ್ಲಿ ಸಂಶಯವಿಲ್ಲ.



